



## ಸುಧಾರಣೆಯೇ ಇಲ್ಲ

**ಜಾ**ಣರ ಪೆಟ್ಟಿಗೆ ವಿಭಾಗಕ್ಕೆ ಪ್ರತಿ ವಾರ ಹತ್ತಾರು ಪತ್ರಗಳು ಧಾರಾವಾಹಿಗಳ ಬಗ್ಗೆ ಬರುತ್ತವೆ. ಧಾರಾವಾಹಿಗಳಲ್ಲಿ ತೋರಿಸುತ್ತಿರುವ ಕ್ರೌರ್ಯ, ಅನೈತಿಕ ಸಂಬಂಧಗಳು, ದಬ್ಬಾಳಿಕೆ, ಮೋಸ, ಮನೆಮುರುಕುತನ ಇತ್ಯಾದಿಗಳ ಬಗ್ಗೆಯೇ ಬರೆದಿರುತ್ತಾರೆ. ಸಾಮಾನ್ಯವಾಗಿ ಎಲ್ಲರ ಅಭಿಪ್ರಾಯಗಳೂ ಸಹ ಒಂದೇ ರೀತಿ ಇರುತ್ತವೆ.

ಆದರೂ ಸಹ ಯಾವುದೇ ವಾಹಿನಿಗಳು ತಮ್ಮ ಕಾರ್ಯವೈಖರಿಯಲ್ಲಿ ಏನೂ ಬದಲಾವಣೆ ಮಾಡಿಕೊಂಡಂತೆ ಕಾಣಿಸುತ್ತಿಲ್ಲ. ಇತ್ತೀಚೆಗೆ ಪ್ರಸಾರವಾಗುತ್ತಿರುವ 'ಅಂಜಲಿ' ಧಾರಾವಾಹಿಯು ಮಕ್ಕಳ ಮೇಲೆ ಏನು ಪರಿಣಾಮ ಬೀರಬಹುದು ಎಂದು ಯೋಚಿಸಿದರೆ ಭಯವಾಗುತ್ತದೆ. ಎಷ್ಟೇ ವಿರೋಧಗಳಿದ್ದರೂ ನಾವು ತೋರಿಸುವುದು ಮಾತ್ರ ಇದೇ ಎನ್ನುವ ಆಲೋಚನೆ ಚಾನೆಲ್‌ಗಳಿಗೆ ಇದ್ದಂತಿದೆ.

ಕಲಾಮೂರ್ತಿ, ಬೆಂಗಳೂರು

## ಇದು ವರ್ತನೆಯೇ?

**ಕ**ಳೆದ ಬಾರಿಯ ಬಿಗ್ ಬಾಸ್‌ನಲ್ಲಿ ಹುಚ್ಚ ವೆಂಕಟ್ ಒಬ್ಬನಿಗೆ ಹೊಡೆದು ಸ್ಪರ್ಧೆಯಿಂದ ಹೊರಬಿದ್ದ ವಿಷಯ ಇನ್ನೂ ವೀಕ್ಷಕರು ಮರೆತಿಲ್ಲ. ಆದರೆ ಈ ಬಾರಿ ಅವರನ್ನು ಮೀರಿಸುವ ಮತ್ತೊಬ್ಬ ಸ್ಪರ್ಧಿ ಆಗಿದ್ದಾನೆ ಎಂದರೆ ತಪ್ಪಾಗಲಾರದು. ಅವನ ವರ್ತನೆ, ಮಾತು, ನಡವಳಿಕೆ ತೀರ ಅಸಹ್ಯ ಉಂಟು ಮಾಡುತ್ತದೆ. ನಿಜವಾಗಲೂ ಸಹಿಸಲಸಾಧ್ಯ.

–ಎನ್. ಎಸ್. ಚಂದ್ರಶೇಖರ್, ಬೆಂಗಳೂರು

## ಚಲನಚಿತ್ರ ಗೀತೆಗಳ ಪ್ರಸಾರ ಹೀಗೇಕೆ?

**ದೂ**ರದರ್ಶನದಲ್ಲಿ ಮೂಡಿ ಬರುವ ಕನ್ನಡ ಚಲನ ಚಿತ್ರಗೀತೆಗಳು ಮನೋರಂಜನೆ ನೀಡುವ ನಿಟ್ಟಿನಲ್ಲಿ ಹಿಂದೆ ಬಿದ್ದಿವೆ! 'ಉದಯ ಮ್ಯೂಜಿಕ್', 'ರಾಜ್ ಮ್ಯೂಜಿಕ್' ಇವೆರಡೂ ಚಾನೆಲ್‌ಗಳು ಗೀತೆಗಳನ್ನು ಪ್ರಚುರಪಡಿಸುವ 'ಅಗ್ರ ಚಾನೆಲ್‌ಗಳು'. ಆದರೆ ಈ ಚಾನೆಲ್‌ಗಳು ಬೆರಳೆಣಿಕೆಯಷ್ಟು ಗೀತೆಗಳನ್ನು ಪ್ರಚುರಪಡಿಸುತ್ತಿವೆ.

1954 ರಿಂದ 2016ರ ವರೆಗೆ ಒಂದು ಅಂದಾಜಿನಂತೆ 3000ಕ್ಕೂ ಅಧಿಕ ಚಲನಚಿತ್ರಗಳು ಬಿಡುಗಡೆಗೊಂಡಿವೆ. ಅವುಗಳಲ್ಲಿ ಬರುವ ಹಾಡುಗಳು, ಒಂದೊಂದೂ ರತ್ನದಂತೆ. ಆದರೆ ಅವುಗಳನ್ನು ಬಿತ್ತರಿಸುವ ಚಾನೆಲ್‌ಗಳಿಗೆ ಕನ್ನಡ ಅಲರ್ಜಿಯೆ? ತೋರಿಸುವ ಕೆಲವೇ ಗೀತೆಗಳ ಮಧ್ಯೆ ಅನಾವಶ್ಯಕವಾಗಿ ನಿರೂಪಕರು ಸಂವಾದ, ಕುಚೇಷ್ಟೆ, ಕಾಲಹರಣ ಮಾಡುತ್ತಾರೆ. ಅನ್ಯ ಚಾನೆಲ್‌ಗಳು, ಕೇವಲ ಮನೋರಂಜನೆಗಾಗಿ ಮೀಸಲಿಟ್ಟಿವೆ. ನಮ್ಮ ಚಂದನ ವಾಹಿನಿ ಅಂತೂ ನೋಡುಗನ ತಾಳ್ಮೆ ಪರೀಕ್ಷೆ ಮಾಡುತ್ತಿದೆ. ನಿತ್ಯ ಪುನರಾವರ್ತನೆ. ಈ ಪ್ರಶ್ನೆಗೆ ಉತ್ತರ ಸಿಗಬಲ್ಲದೆ?

–ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

ವಾರದ ಪತ್ರ

## ಅಜ್ಜಿ ಹೇಳಿದ ಕಥೆ..

'ಸರಳ ಜೀವನ' ವಾಹಿನಿಯಲ್ಲಿ ಚಿಕ್ಕ ಮಕ್ಕಳಿಗಾಗಿ ಪ್ರತಿದಿನ ಅಜ್ಜಿ ಹೇಳಿದ ಕಥೆ ಕಾರ್ಯಕ್ರಮವು ಪ್ರಸಾರವಾಗುತ್ತದೆ. ಈ ಕಾರ್ಯಕ್ರಮದ ಉದ್ದೇಶ ಮಕ್ಕಳಿಗೆ ನಮ್ಮ ರಾಮಾಯಣ, ಮಹಾಭಾರತ ಮುಂತಾದ ಶ್ರೇಷ್ಠ ಕತೆಗಳ ಪರಿಚಯ ಮಾಡಿಕೊಡುವುದು. ಆದರೆ, ಇಲ್ಲಿ ಕನ್ನಡ ಭಾಷೆಯಲ್ಲಿ ಬಹಳಷ್ಟು ಇಂಗ್ಲಿಷ್ ಪದಗಳನ್ನೇ ಉಪಯೋಗಿಸುತ್ತಾರೆ. ಕೆಲವೊಂದು ಸಾರಿ ಕಥೆಯ ಮೂಲವನ್ನೇ ಬದಲಾಯಿಸಿ ಹೇಳಿಬಿಡುತ್ತಾರೆ.

ಉದಹರಣೆಗೆ: ಬಾಲಕೃಷ್ಣನ ಚೇಷ್ಟೆಗಳನ್ನು ಸಹಿಸಲಾಗದೆ ಅವನನ್ನು ಒಂದು ದೊಡ್ಡ ಕಲ್ಲಿನ ಒರಳಿಗೆ ಕಟ್ಟಿಹಾಕುತ್ತಾಳೆ ಯಶೋದೆ. ಕೃಷ್ಣ ಆ ಭಾರಿ ಒರಳನ್ನೇ ಸರಾಗವಾಗಿ ಎಳೆದು ತರುವಾಗ ಒಂದು ವೃಕ್ಷದ ಮಧ್ಯೆ ಸಿಕ್ಕಿ ಮರ ಸೀಳಾಗುತ್ತದೆ. ಅದರಿಂದ ಇಬ್ಬರು ಗಂಧರ್ವರ ಶಾಪ ವಿಮೋಚನೆ ಆಗುತ್ತದೆ. ಆದರೆ ಕಥೆಯಲ್ಲಿ 'ಕೃಷ್ಣನನ್ನು ಒಂದು ಭಾರಿ ಟೀಪಾಯ್ಗೆ ಕಟ್ಟಿದರು. ಭಾರಿ ಟೀಪಾಯನ್ನು ಬಾಲಕೃಷ್ಣ ಅಷ್ಟು ದೂರ ಎಳೆದನೆಂದು ಯಾರೂ ನಂಬಲಿಲ್ಲ. ಮರದಿಂದ ಇಬ್ಬರು ಮನುಷ್ಯರು ಬಂದರು' ಹೀಗೆ ಕಥೆಯನ್ನು ತಿರುಚುವುದು, ಆ ಕಾಲಕ್ಕೆ ಬಳಕೆಯಲ್ಲಿ ಇಲ್ಲದ ವಸ್ತುಗಳ ಹೆಸರನ್ನು ಹೇಳುವುದು, ಮಕ್ಕಳಿಗೆ ತಪ್ಪು ಕಲಿಸಿದಂತಾಗುತ್ತದೆ. ವಾಹಿನಿಯವರು ಈ ವಿಷಯದಲ್ಲಿ ತಕ್ಷಣ ಜಾಗರೂಕತೆ ವಹಿಸಬೇಕು.

–ಶ್ರೀನಾಥ್ ಕೊನೇಟಿ, ಬೆಂಗಳೂರು

## ಭಾಷಾ ಶೈಲಿ ಬದಲಾಗಲಿ

'ಹರ ಹರ ಮಹಾದೇವ' ಧಾರಾವಾಹಿಯಲ್ಲಿ ಪಾತ್ರಧಾರಿಗಳು ಗ್ರಾಂಥಿಕ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ. ಪಾರ್ವತಿಯ ಬಾಯಲ್ಲಿ ಅಪ್ಪ, ಅಮ್ಮ ಎಂದು ಹೇಳಿಸುತ್ತಾರೆ. ಅದರ ಬದಲು ಪಿತಾಶ್ರೀ, ಮಾತಾಶ್ರೀ ಎಂದೋ ಅಥವಾ ಅಪ್ಪಾಜಿ, ಅಮ್ಮಾಜಿ ಎಂದೋ ಹೇಳಿಬಹುದಲ್ಲವೇ? ಪೌರಾಣಿಕ ಕಥಾನಕಕ್ಕೆ ಈ ಪದಗಳು ಶೋಭೆ ತರುತ್ತವೆ. ಹಾಗೆಯೇ ಸ್ವರ – ವ್ಯಂಜನಗಳ ವ್ಯತ್ಯಾಸ ಗೊತ್ತಿಲ್ಲದೆ ಸಂಭಾಷಣೆ ಬರೆದಿದ್ದಾರೆ. ಸಂಭಾಷಣಾಕಾರರು ಇನ್ನು ಮುಂದಾದರೂ ಎಚ್ಚೆತ್ತುಕೊಳ್ಳುವರೆಂದು ಆಶಿಸೋಣವೇ?

–ಎಲ್. ಸ್ವರ್ಣಲತಾ, ಯಾದವಗಿರಿ

## ಆಸ್ತಿ ಹಂಚಿಕೆ ಖಾಸಗಿ ಸಂಗತಿ

ದಿನಾಂಕ 19.10.16 ರಂದು ಎಲ್ಲಾ ಖಾಸಗಿ ಟಿ.ವಿ. ಚಾನೆಲ್‌ಗಳವರು ಒಂದು ಮಹತ್ತರವಾದ ಸುದ್ದಿ ಪ್ರಸಾರ ಮಾಡಿದರು. ಕನ್ನಡದ ಮೇರು ನಟ, ಕನ್ನಡದ ಕಣ್ಮಣಿ ಡಾ.ರಾಜ್‌ಕುಮಾರ್ ಅವರ ಪಿತ್ರಾರ್ಜಿತ ಆಸ್ತಿಯನ್ನು ಅವರ ಕುಟುಂಬ ಸದಸ್ಯರ ಹೆಸರಲ್ಲಿ ಹಂಚಿಕೆ ಮಾಡಿ ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಂದಣಿ ಮಾಡಲಾಗಿದೆ. ಇದು ದೊಡ್ಮನೆಯ ಖಾಸಗಿ ವಿಚಾರ. ಇಂಥವೆಲ್ಲಾ ಜಗ್ಗಜಾಹೀರು ಮಾಡುವ ಅವಶ್ಯಕತೆ ಚಾನೆಲ್‌ಗಳವರಿಗೆ ಯಾಕೆ ಬೇಕು? ಇವೆಲ್ಲಾ ಟಿ.ಆರ್.ಪಿ. ಹೆಚ್ಚಿಗೆ ಮಾಡುವುದಕ್ಕೆ ಸಹಾಯಕವಾಗುತ್ತದೆ ಅಂತಲೇ?

–ಮೊಳಕಾಲ್ಮೂರು ಸುರೇಶ್, ಬಳ್ಳಾರಿ

## ಯಾರು ಹಿತವರು?

'ಅಂಜಲಿ', 'ನೀಲಿ' ಧಾರಾವಾಹಿಗಳಲ್ಲಿ ನಟಿಸಿರುವ ಮಕ್ಕಳು ನಿಜಕ್ಕೂ ಪ್ರತಿಭಾವಂತರು. ಆದರೆ ಅವರ ಪ್ರತಿಭೆ ಭೂತಗಳಾಗಿ ಹೊರಬಂದಿದೆ. ನಾಗಿಣಿ, ಲಕ್ಷ್ಮೀ ಬಾರಮ್ಮಗಳಲ್ಲಿ ಕೃತಕ ಹಾವುಗಳ ಪ್ರದರ್ಶನ. ಖಳನಾಯಕಿಯರಂತೂ ಎಲ್ಲಾ ಧಾರಾವಾಹಿಗಳಲ್ಲಿ ನೋಡಲು ಸಿಗುತ್ತಾರೆ. ಇವುಗಳ ಮಧ್ಯೆ ಈಗ 'ಹರ ಹರ ಮಹಾದೇವ', 'ಗಿರಿಜಾ ಕಲ್ಯಾಣ'ದಂತಹ ಧಾರಾವಾಹಿಗಳು ಚೆನ್ನಾಗಿ ಬರುತ್ತಿದ್ದು, ನೋಡಿ ಖುಷಿ ಪಡಬಹುದು.

–ಹೊಸೂರು ಸುಶೀಲಾ ಬಸವಯ್ಯ, ನೆಲಮಂಗಲ

## ಡ್ರೆಸ್ ಬದಲಾಗಲಿ

ಝೀ ಕನ್ನಡ ವಾಹಿನಿಯ 'ಗಂಗಾ' ಧಾರಾವಾಹಿಯಲ್ಲಿ ಉತ್ತರ ಕರ್ನಾಟಕದ ಪ್ರಾದೇಶಿಕ ಭಾಷೆಯ ಸೊಗಡು ಅನಾವರಣಗೊಳ್ಳುತ್ತಿದೆ. ಹೂಲಿಶೇಖರ್ ಅವರ ಸಂಭಾಷಣೆ ಧಾರಾವಾಹಿ ಓಟಕ್ಕೆ ಪೂರಕವಾಗಿದೆ. ಗಂಗಾಳ ಡ್ರೆಸ್ ಬದಲಿಸುವತ್ತ ನಿರ್ದೇಶಕರು ಗಮನ ಹರಿಸಿದರೆ ಒಳಿತು.

–ಸುರೇಶ ಅಂಗಡಿ, ಹೂವಿನಹಡಗಲಿ

## ಹಿಗ್ಗಿಸುವುದೇಕೆ?

'ಕುಲವಧು'ವಿನ ವಚನ ಹುಚ್ಚನಂತೆ ನಟಿಸುತ್ತಿರುವ ಡಾಕ್ಟರ್ ಬಗ್ಗೆ, ಅವನು ತನ್ನೊಡನೆ ನಡೆದುಕೊಳ್ಳುತ್ತಿರುವ ಬಗ್ಗೆ ಮನೆಯವರಿಗೆ ಎಲ್ಲರೂ ಒಟ್ಟಾಗಿದ್ದಾಗ ಹೇಳಬಹುದಿತ್ತು.

ಪುಟ್ಟ ಗೌರಿ ಮದುವೆಯಲ್ಲಿ ಗೌರಿ, ಸಾಗರಿ ತನ್ನ ತಂದೆಯನ್ನು ಅಪಹರಣ ಮಾಡಿರುವುದು ಹಾಗೂ ಅವರನ್ನು ಬಿಡಲು ಅವಳು ಹೇಳಿರುವ ಷರತ್ತುಗಳನ್ನು ಅಜ್ಜಮ್ಮ ಮತ್ತಿತರ ಮುಂದೆ ಹೇಳಬಹುದಿತ್ತು.

ಕಿನ್ನರಿಯನ್ನು ಸುಳ್ಳು ಹೇಳಿ ಕರೆದುಕೊಂಡು ಹೋಗುವಾಗ ಸುಳ್ಳು ತಂದೆ ಕೊಟ್ಟಿರುವ ವಿಳಾಸದಿಂದ ತಿಳಿಯಬಹುದಿತ್ತು. ಒಟ್ಟಿನಲ್ಲಿ ಧಾರಾವಾಹಿಗಳನ್ನು ಹಿಗ್ಗಿಸಬೇಕು. ಟಿ.ಆರ್.ಪಿ. ಗಾಗಿ ಎನ್ನೋಣವೇ?

–ಶಾಂತ ನಾಗರಾಜ್. ಕೆ., ಬೆಂಗಳೂರು